**ದಿನಾಂಕಃ 14-08-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಶ್ರೀ ಎಸ್.ವಿ.ಆರ್. ವಕೀಲರಿಂದಃ**

ವಾದಿಯು ಈ ದಾವಾವನ್ನು ಭಾಗಕ್ಕಾಗಿ ಸಲ್ಲಿಸಿರುತ್ತಾರೆ. ಸರ್ವೆ ನಂ. 2ರಲ್ಲಿ ಭಾಗ ಬೇಕು ಎಂದುದಾವಾವನ್ನು ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ 7-37 ಗುಂಟೆ ಇರುತ್ತದೆ. ದಾವಾ ಷೆಡ್ಯೂಲ್ ಚೆಕ್ಕುಬಂದಿಯು ಪೂರ್ವಕ್ಕೆ ಚಿಕ್ಕಹನುಮಂತಪ್ಪನ ಜಮೀನು, ಪಶ್ಚಿಮಕ್ಕೆಃ ಕೆಟಿಹಳ್ಳಿ ರಸ್ತೆ, ಉತ್ತರಕ್ಕೆಃ ಮಚ್ಚಹನುಮಂತನ ಜಮೀನು, ದಕ್ಷಿಣಕ್ಕೆ ದಾಸಣ್ಣನ ಜಮೀನು. ವಾದಿಯ ತಂದೆಯ ಹೆಸರು ಮುದ್ದೀರಪ್ಪ, ಮುದ್ದೀರಪ್ಪ ಮೃತರಾಗಿ ಎಷ್ಟು ವರ್ಷ ಆಗಿದೆ ಗೊತ್ತಿಲ್ಲ, ಆತನನ್ನು ನಾನು ನೋಡಿರುವುದಿಲ್ಲ, ಮುದ್ದೀರಪ್ಪರವರಿಗೆ 7ಜನ ಮಕ್ಕಳು ಅವರೆಂದರೆ ಈರಣ್ಣ, ಚಿಕ್ಕನಾಗಪ್ಪ, ಚಿಕ್ಕಣ್ಣ, ನಾಗಣ್ಣ, ದೊಡ್ಡಣ್ಣ, ಸಣ್ಣೀರಪ್ಪ, ಮುದ್ದಣ್ಣ ಅವರ ಮಕ್ಕಳು ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ವಿಚಾರಣಾ ಪತ್ರದಲ್ಲಿ ಏನು ಇದೆ ನನಗೆ ಗೊತ್ತಿಲ್ಲ.

ಮುದ್ದೀರಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ, ದಾವಾ ಆಸ್ತಿಯಲ್ಲಿ ನಾಲ್ಕು ಹುಣಸೇಮರಗಳು, ಮೂರು ಮನೆಗಳು ಇವೆ. ವಾದಿಯು ದಾವಾ ಆಸ್ತಿಯಲ್ಲಿ ಇರುವ ಮನೆಗಳಲ್ಲಿ ಇರುವುದಿಲ್ಲ ಆತನು ಬೇರೆ ವಾಸವಾಗಿದ್ದಾನೆ. ದಾವಾ ಆಸ್ತಿಯಲ್ಲಿ ಇರುವ ಮನೆಗಳಲ್ಲಿ ವಾದಿಯ ಅಣ್ಣ-ತಮ್ಮಂದಿರುಗಳು ಬಿಟ್ಟರೆ ಬೇರೆ ಯಾರು ಇರುವುದಿಲ್ಲ. ವಾದಿಯ ಅಣ್ಣ-ತಮ್ಮಂದಿರು ಬೇರೆ ಬೇರೆ ವಾಸವಾಗಿರುತ್ತಾರೆ. ವಾದಿಗೆ ದಾವಾ ಆಸ್ತಿಯ ಸರ್ವೆ ನಂ. 2ರಲ್ಲಿ ಪಾಲು ಇರುತ್ತದೆ. ಅದೇ ರೀತಿ ವಾದಿಯ ಅಣ್ಣ-ತಮ್ಮಂದಿರುಗಳಿಗೆ ಪಾಲು ಇರುತ್ತದೆ. ವಾದಿಯ ಅಣ್ಣ-ತಮ್ಮಂದಿರುಗಳಲ್ಲಿ ಮೂರು ಜನ ಮಾತ್ರ ದಾವಾ ಆಸ್ತಿಯಲ್ಲಿ ಇರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ವಿಭಾಗವಾಗಿಲ್ಲ ಈಗಲೂ ಸಹ ಜಂಟಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ.

ನಾನು ಮುದ್ದಣ್ಣನನ್ನು ನೋಡಿರುತ್ತೇನೆ. ಮುದ್ದಣ್ಣನ ತಂದೆಯ ಹೆಸರು ಮುದ್ದೀರಪ್ಪ, ಮುದ್ದಣ್ಣನಿಗೂ ನನಗೂ ಈ ಹಿಂದೆ ಪರಿಚಯವಿತ್ತು ಮದುವೆಯಾದ ಮೇಲೆ ಗುಜ್ಜಾನಾಡುನಲ್ಲಿ ವಾಸವಿರುತ್ತಾರೆ. ಸದರಿ ಮುದ್ದಣ್ಣನವರು ಮೃತರಾಗಿರುತ್ತಾರೆ. ಮುದ್ದಣ ನವರು ಮೃತರಾಗಿ ಸುಮಾರು 25 ವರ್ಷವಾಗಿದೆ. ನನಗೆ ಮುದ್ದಣ್ಣನು ಹುಟ್ಟಿದ ದಿನದಿಂದಲೂ ಪರಿಚಯವಿರುತ್ತಾನೆ. ಮುದ್ದಣ್ಣನು 1986 ರಲ್ಲಿ ಕರಾರುಪತ್ರವನ್ನು ಬರೆದು ಕೊಟ್ಟಿರುತ್ತಾನೆ. ಸದರಿ ಕರಾರುಪತ್ರವನ್ನು ರೂ. 6500-00 ಗಳಿಗೆ ಬರೆದು ಕೊಟ್ಟಿರುತ್ತಾರೆ. ಮುಂಗಡ ಹಣವನ್ನು ರೂ. 3500-00 ನೀಡಿದ್ದರು. ಸದರಿ ಕರಾರುಪತ್ರವನ್ನು ಬರೆದ ಸಂದರ್ಭದಲ್ಲಿ ಹಾಜರಿದ್ದೆ. ಕರಾರುಪತ್ರವನ್ನು ಚೇರ್‌ಮನ್ ರವರ ಮನೆಯಲ್ಲಿ ಬರೆಯಲಾಗಿತ್ತು. ಪತ್ರವನ್ನು ಓಬಳಪ್ಪ ರವರು ತರಿಸಿದ್ದರು. ಸದರಿ ಕರಾರುಪತ್ರವನ್ನು ಕೈಯಿಂದ ಬರೆಯಲಾಗಿರುತ್ತದೆ. ಅದನ್ನು ಗೋಪಾಲರೆಡ್ಡಿ ರವರು ಬರೆದಿರುತ್ತಾರೆ.

ಸದರಿ ಕರಾರುಪತ್ರವು ರೂ. 5-00 ಛಾಪಕಾಗದದ್ದಾಗಿರುತ್ತದೆ. ಸದರಿ ಕರಾರುಪತ್ರಕ್ಕೆ ಓಬಳಪ್ಪ ಸಹಿ ಹಾಕಿರುತ್ತಾನೆ. ಸಾಕ್ಷಿದಾರರಾಗಿ ಓಬಳಪ್ಪ ಮತ್ತು ನಾನು ಸಹಿ ಹಾಕಿರುತ್ತೇವೆ. ನನಗೂ ಮತ್ತು ವಾದಿಗೂ ದ್ವೇಷ ಇರುವುದರಿಂದ ಈ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುದ್ದಣ್ಣನವರು ಮೊದಲು ಸದರಿ ಕರಾರುಪತ್ರದಲ್ಲಿ ಹೆಬ್ಬೆಟ್ಟನ್ನು ಹಾಕಿರುತ್ತಾರೆ. ಎಷ್ಟು ಹೆಬ್ಬೆಟ್ಟನ್ನು ಹಾಕಿರುತ್ತಾರೆ ನನಗೆ ಗೊತ್ತಿಲ್ಲ. ಕರಾರುಪತ್ರದ ಸಂಬಂದ ಮಾತುಕತೆ ನಡೆಯುವ ಸಂದರ್ಭ ನಾನು ಹಾಜರಿದ್ದೆ. ಯಾವುದೇ ಕರಾರುಪತ್ರವನ್ನು ಬರೆದುಕೊಡದಿದ್ದರೂ ನಾನು ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸದರಿ ಕರಾರುಪತ್ರಕ್ಕೆ ಒಂದು ಕಡೆ ಸಹಿ ಮಾಡಿದ್ದೇನೆ. ನಾನು ಆಂಗ್ಲಬಾಷೆಯಲ್ಲಿ ಸಹಿ ಮಾಡಿರುತ್ತೇನೆ. ಓಬಳಪ್ಪ ಸಹ ಆಂಗ್ಲಬಾಷೆಯಲ್ಲಿ ಸಹಿ ಮಾಡಿರುತ್ತಾರೆ. 1-03 ಗುಂಟೆ ಜಮೀನುನ್ನು ಮುದ್ದಣ್ಣನು ದೊಡ್ಡಣ್ಣನಿಗೆ ಮಾರಾಟ ಮಾಡಿರುತ್ತಾರೆ. 1-03 ಗುಂಟೆಗೆ ಚೆಕ್ಕುಬಂದಿಃ ಪೂರ್ವಕ್ಕೆಃ ಚಿಕ್ಕಹನುಮಂತಪ್ಪನ ಜಮೀನು, ಪಶ್ಚಿಮಕ್ಕೆಃ ಕೆಟಿಹಳ್ಳಿ ರಸ್ತೆ,

ಉತ್ತರಕ್ಕೆ: ಸಣ್ಣೀರಪ್ಪನ ಜಮೀನು, ದಕ್ಷಿಣಕ್ಕೆ ದಾಸಣ್ಣನ ಜಮೀನು. ನಾನು ಹೇಳುತ್ತಿರುವ ಚೆಕ್ಕುಬಂದಿಯು 1-03 ಗುಂಟೆಯಾದ್ದಾಗಿರುತ್ತದೆ. ದಾವಾ ಆಸ್ತಿಯ ಸರ್ವೆ ನಂ. 2 ವಾದಿ ಮತ್ತು ಪ್ರತಿವಾದಿಗಳಿಗೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್‌ಜಡ್ಜ್ ಮತ್ತು ಜೆಎಂಎಫ್‌ಸಿ
ಪಾವಗಡ